ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಇಲಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE : 16/9/2020

### ಮಾರುಕಟ್ಟೆ ಮೌಲ್ಯದ 2 ಪಟ್ಟು ಹೆಚ್ಚು ದರ ನಿಗದಿಗೆ ಸಚಿವ ಸಂಪುಟ ಸಭೆ ನಿರ್ಧಾರ

# 'ಬಿ' ಖರಾಬು ಜಮೀನು ಸಕ್ರಮಕ್ಕೆ ಅಸ್ತು

16-9-2020

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ 18 ಕಿ.ಮೀ ವ್ಯಾಪ್ತಿಯೊಳಗಿನ 'ಬಿ' ಖರಾಬು ಜಮೀನು ಬಳಸುತ್ತಿರುವವರಿಗೆ ಮಾರುಕಟ್ಟೆ ಮೌಲ್ಯದ ಎರಡು ಪಟ್ಟು ಹೆಚ್ಚು ದರ ವಿಧಿಸಿ ಸಕ್ರಮ ಮಾಡಿಕೊಡಲು ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಇದಕ್ಕಾಗಿ ಭೂಕಂದಾಯ ಕಾಯ್ದೆ ಕಲಂ 64 (2) ಮತ್ತು ಕಲಂ (69) ಕ್ಕೆ ತಿದ್ದುಪಡಿಗೆ ಸಚಿವ ಸಂಪುಟ ಒಪ್ಪಿಗೆ ನೀಡಿದೆ ಎಂದು ಕಾನೂನು ಮತ್ತ ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಾಕಷ್ಟು 'ಬಿ' ಖರಾಬು ಜಮೀನು ಲೇಔಟ್‌ಗಳು, ಇನ್ನಿತರ ಸ್ವತ್ತುಗಳ ಮಧ್ಯೆ ಇವೆ. ಇವುಗಳನ್ನು ಸಿಕ್ಕಿಬಿದ್ದ ಬಿ ಖರಾಬು ಜಮೀನು (ಲಾಕ್ಡ್) ಎಂದೂ ಕರೆಯಲಾಗುತ್ತದೆ. ಇಂದಿನ ತೀರ್ಮಾನ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಅನ್ವಯ ಆಗುವುದಿಲ್ಲ. ಅಲ್ಲದೆ, ನಗರ ಪ್ರದೇಶದಲ್ಲಿ ಕೃಷಿ ಜಮೀನು ಇದ್ದರೆ, ಅವುಗಳನ್ನು ಸಕ್ರಮ ಮಾಡಿಕೊಡುವುದಿಲ್ಲ. ಸಕ್ರಮ ಮಾಡಿಸಿಕೊಳ್ಳಲು ಅರ್ಜಿ ಸಲ್ಲಿಸಬೇಕಾಗುತ್ತದೆ. ಇಲ್ಲವಾದರೆ, ಸರ್ಕಾರವೇ ಬಿ ಖರಾಬು ಜಮೀನು ಖುಲ್ಲಾ ಮಾಡುವ ಬಗ್ಗೆ ಆದೇಶ ಹೊರಡಿಸುತ್ತದೆ ಎಂದು ಅವರು ಹೇಳಿದರು.

'ಇಲ್ಲಿಯವರೆಗೆ ಸ್ವತ್ತುಗಳ ಮಾಲೀಕರು ತಮ್ಮ ಸ್ವತ್ತಿನ ವ್ಯಾಪ್ತಿಯ ಒಳಗೇ ಇದ್ದ ಬಿ ಖರಾಬು ಭೂಮಿಯನ್ನು ಅಕ್ರಮವಾಗಿ ಬಳಸುತ್ತಿದ್ದರು. ಉದಾಹರಣೆಗೆ ಯಾರೋ ಒಬ್ಬ ಮಾಲೀಕ 10 ಎಕರೆ ಜಾಗವನ್ನು ಹೊಂದಿದ್ದರೆ, ಅಲ್ಲಿ ಸಣ್ಣ ಬಿ ಖರಾಬು ಜಾಗ ಇರುತ್ತದೆ. ಇನ್ನು ಮುಂದೆ ಆ ಜಾಗಕ್ಕೆ ಸರ್ಕಾರ ನಿಗದಿ ಮಾಡಿದ ದರವನ್ನು ಪಾವತಿಸಿ ಸಕ್ರಮಗೊಳಿಸಿಕೊಳ್ಳಬೇಕು. ಗ್ರಾಮಾಂತರ ಪ್ರದೇಶದಲ್ಲಿ ಈ ಭೂಮಿ ಸಕ್ರಮಕ್ಕೆ ಮಾರುಕಟ್ಟೆ ಮಾರ್ಗಸೂಚಿ ದರದ ನಾಲ್ಕು ಪಟ್ಟು ಇದ್ದರೆ, ನಗರ ಪ್ರದೇಶದಲ್ಲಿ ಎರಡು ಪಟ್ಟು ನಿಗದಿ ಮಾಡಲಾಗಿದೆ' ಎಂದು ಕಂದಾಯ ಸಚಿವ ಆರ್.ಅಶೋಕ 'ಪ್ರಜಾವಾಣಿ'ಗೆ ತಿಳಿಸಿದರು.

ಕಂದಾಯ ಇಲಾಖೆ ಅಧಿಕಾರಿಗಳ ಪ್ರಕಾರ, ಬೆಂಗಳೂರು ನಗರ ಮತ್ತು ಗ್ರಾಮಾಂತರ ವ್ಯಾಪ್ತಿಯಲ್ಲಿ ಸುಮಾರು 21,000 ಎಕರೆಯಷ್ಟು ಬಿ ಖರಾಬು ಭೂಮಿ ಇದೆ. ಇದರಲ್ಲಿ ಸಾಕಷ್ಟು ಭೂಮಿ ವಿವಿಧ ಸ್ವತ್ತುಗಳ ಮಧ್ಯೆ ಸೇರಿಕೊಂಡಿದೆ.



ವಿಧಾನಸಭೆಯಲ್ಲಿ ಮಂಗಳವಾರ ಸಚಿವ ಸಂಪುಟದ ಸಭೆಯ ನಂತರ ಸಚಿವರಾದ ಬಿ.ಸಿ. ಪಾಟೀಲ, ಆರ್. ಅಶೋಕ, ಬಸವರಾಜ ಬೊಮ್ಮಾಯಿ, ಸಿ.ಟಿ. ರವಿ, ರಮೇಶ ಜಾರಕಿಹೊಳಿ, ಲಕ್ಷ್ಮಣ ಸವದಿ ಅವರು ಚರ್ಚೆ ನಡೆಸಿದರು — ಪ್ರಜಾವಾಣಿ ಚಿತ್ರ

## ಆನೇಕಲ್‌ಗೆ 50 ಎಂಎಲ್‌ಡಿ ಸಂಸ್ಕರಿಸಿದ ನೀರು

ಅಗರ ಕೆರೆಯಿಂದ ಆನೇಕಲ್‌ಗೆ 35 ಎಂಎಲ್‌ಡಿ ಸಂಸ್ಕರಿಸಿದ ನೀರನ್ನು ಕೊಂಡೊಯ್ಯಲು ಅಳವಡಿಸುವ ಕಾಮಗಾರಿ ಪೈಪ್‌ಲೈನ್‌ನಲ್ಲಿ ಭಾಗಶಃ ಮಾರ್ಪಾಡು ಮಾಡಲಾಗುವುದು. ಹುಳಿಮಾವು ಹಾಗೂ ಚಿಕ್ಕ ಬೇಗೂರು ಎಸ್‌ಟಿಪಿಯಿಂದ ಲಭ್ಯವಿರುವ 15 ಎಂಎಲ್‌ಡಿಯೊಂದಿಗೆ ಒಟ್ಟಾರೆ 50 ಎಂಎಲ್‌ಡಿ ನೀರನ್ನು ಈಗಾಗಲೇ ಅಳವಡಿಸಿರುವ ಆನೇಕಲ್ ಯೋಜನೆಯ ಪೈಪ್‌ಲೈನ್‌ಗೆ ಜೋಡಣೆ ಮಾಡಲಾಗುವುದು. ಈ ಕಾಮಗಾರಿಗೆ ₹30 ಕೋಟಿ ಬಿಡುಗಡೆ ಮಾಡಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ಮಾಧುಸ್ವಾಮಿ ಹೇಳಿದರು.

**ಔಷಧ, ವೈದ್ಯಕೀಯ ಉಪಕರಣಗಳ ಖರೀದಿ:** 2021 ನೇ ಸಾಲಿಗೆ ನ್ಯಾಷನಲ್ ಹೆಲ್ತ್ ಮಿಷನ್ ಯೋಜನೆ ಅಡಿ ವೈದ್ಯಕೀಯ ಉಪಕರಣ ಖರೀದಿಸಲು ₹25.73 ಕೋಟಿ ಮತ್ತು ಔಷಧ ಖರೀದಿಸಲು ₹24.90 ಕೋಟಿ ಬಳಕೆ ಮಾಡಲು ಒಪ್ಪಿಗೆ.

- ಬೆಂಗಳೂರು ಗ್ರಾಮಾಂತರ ಜಿಲ್ಲೆ ಯಲಚಗೆರೆ ಗ್ರಾಮದ ಸರ್ವೆ ಸಂಖ್ಯೆ 74 ರಲ್ಲಿ 9 ಎಕರೆ 20 ಗುಂಟೆ ಗೋಮಾಳವನ್ನು ಸಿದ್ದಗಂಗಾ ಮಠದ ಶೈಕ್ಷಣಿಕ ಚಟುವಟಿಕೆಗಾಗಿ ಮಂಜೂರು
- ನೆಲಮಂಗಲ ತಾಲ್ಲೂಕು ಮಂಟನಕುರ್ಚಿ ಗ್ರಾಮದ ಸರ್ವೆ ಸಂಖ್ಯೆ 5 ರಲ್ಲಿ 3 ಎಕರೆ ಜಮೀನನ್ನು ಗುರುದೇವಾ ಸೇವಾ ಸಂಸ್ಥೆಯ ಸಮಾಧಾನ ಆಶ್ರಮಕ್ಕೆ ಮಂಜೂರು